
# ಶೋಧದ ನೆಲೆ

ಸಂಪಾದಕರು

ಡಾ. ತಿಪ್ಪೇಸ್ವಾಮಿ. ಡಿ. ಎಸ್

ಡಾ. ಶಿವಲಿಂಗಪ್ಪ. ಆಯ್. ಭಂಡಾರಿ



Scanned with OKEN Scanner

**Title- Karnataka's Kalachuri's Sects mentioned in the Inscriptions**
**- Dr. S. R. Nagannasvar**

# ಕರ್ನಾಟಕದ ಕಳಚೂರಿಗಳ ಶಾಸನೋಕ್ತ ಧರ್ಮಗಳು

ಪ್ರೊ.ಎಸ್.ಆರ್.ನಾಗಣ್ಣವರ

"ಸರ್ವಜನಾಂಗದ ಶಾಂತಿಯ ತೋಟ ರಸಿಕರ ಕಂಗಳ ಸೆಳೆಯುವ ನೋಟ ಹಿಂದೂ ಕ್ರೈಸ್ತ ಮುಸ್ಲ್ಮಾನ ಪಾರಸಿಕರ ಜೈನರ ಉದ್ಯಾನ ಎಂದು ಕುವೆಂಪು ಅವರು ಭಾರತಾಂಬೆಯ ಮಡಿಲಲ್ಲಿ ಬೆಳೆಯುತ್ತಿರುವ ಕನ್ನಡಾಂಬೆಯ ಉದಾರವಾದವನ್ನು ಸ್ಪಷ್ಟಪಡಿಸುತ್ತಾ ಕರ್ನಾಟಕದ ಈ ಪುಣ್ಯ ಭೂಮಿಯಲ್ಲಿ ಪ್ರಾಚೀನ ಕಾಲದಿಂದಲೂ ಕನ್ನಡ ನಾಡು ಸರ್ವ ಜನಾಂಗದವರಿಗೆ, ಸರ್ವಧರ್ಮಗಳಿಗೆ ಆಶ್ರಯ ನೀಡಿದ ತಾಣ ಎಂಬುದನ್ನು ಅರ್ಥಗರ್ಭಿತವಾಗಿ ತಿಳಿಸಿದ್ದಾರೆ. ಈ ಸನಾತನ ಪರಂಪರೆಯನ್ನು ಕಾಪಾಡಿದ ಕಲ್ಯಾಣದ ಕಳಚೂರಿ ಅರಸರೂ ಸಹ ಶೈವ, ವೈಷ್ಣವ, ಜೈನ ಧರ್ಮಗಳ ಬೆಳವಣಿಗೆಗೆ ಅಪಾರ ಸಹಾಯ ಸಹಕಾರವನ್ನು ನೀಡುತ್ತಿದ್ದರು ಎಂಬುದನ್ನು ಶಾಸನಗಳ ಹಿನ್ನೆಲೆಯಲ್ಲಿ ಪರಿಚಯಿಸುವುದೇ ಈ ಲೇಖನದ ಮುಖ್ಯ ಉದ್ದೇಶ.

ಕಳಚುರಿಯರು ಕ್ರಿ.ಶ. 925 ರಿಂದ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದ್ದರು. ಈ ಮನೆತನದ ಹೆಸರು ಕಳಚುರ್ಯಕುಲವೆಂದು ಇವರ ಕಾಲದಲ್ಲಿ ಹೊರಡಿಸಲಾದ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಇವರು ಮೂಲತಃ ಕಾಲಿಂಜಪುರದವರಾಗಿದ್ದು ನಂತರ ಕರ್ನಾಟಕಕ್ಕೆ ಬಂದರು. ಆದರೆ ಕರ್ನಾಟಕಕ್ಕೆ ಹೇಗೆ ಬಂದರೆಂಬುದಕ್ಕೆ ನಿರ್ಧಿಷ್ಟವಾದ ಮಾಹಿತಿಗಳ ಕೊರತೆ ಎದ್ದು ಕಾಣುತ್ತದೆ.

Scanned with OKEN Scanner

ಉಚಿತ ಎಂಬ ಅರಸನೇ ಕಳಚೂರಿ ಮನೆತನದ ಮೊದಲ ದೊರೆ. ಮೂಲತಃ ಮಂಗಳವೇಡೆಯನ್ನು ರಾಜಧಾನಿಯಾಗಿಸಿಕೊಂಡು ಆಳುತ್ತಿದ್ದರು. ಕಲ್ಯಾಣವನ್ನು ಆಳುತ್ತಿದ್ದ ಚಾಲುಕ್ಯರು ರಾಜಕೀಯವಾಗಿ ಅಭಲರಾಗುತ್ತಿರುವುದನ್ನು ಸದುಪಯೋಗ ಪಡೆದುಕೊಂಡ ಕಳಚೂರಿ ಮನೆತನದ ಬಿಜ್ಜಳನು ಕ್ರಿ.ಶ.1142 ರಲ್ಲಿ ಚಾಲುಕ್ಯರಿಂದ ಕರಹಾಡ ಪ್ರಾಂತವನ್ನು ಪಡೆದುಕೊಂಡನು.

ಕ್ರಿ.ಶ.1153ರಲ್ಲಿ ಚಾಲುಕ್ಯರ ದುರ್ಬಲ ಅರಸನಾದ ಮೂರನೆಯ ತೈಲಪನ ಸೈನ್ಯವನ್ನು ಸೋಲಿಸುವ ಮೂಲಕ ಕಲ್ಯಾಣವನ್ನು ಪಡೆದು ಕಳಚೂರಿ ಚಕ್ರವರ್ತಿ, ಬುಜಬಲ ಚಕ್ರವರ್ತಿ ಎಂಬ ಬಿರುದುಗಳನ್ನು ಧರಿಸಿ ಕ್ರಿ.ಶ.1157 ರಿಂದ ಕಲ್ಯಾಣಕ್ಕೆ ರಾಜಧಾನಿಯನ್ನು ವರ್ಗಾಯಿಸಿ ಅಲ್ಲಿಂದ ಸ್ವತಂತ್ರ ಆಳ್ವಿಕೆಯನ್ನು ಆರಂಭಿಸಿ ಕ್ರಿ.ಶ.1184 ರವರೆಗೆ ವೈಭವದಿಂದ ಆಳ್ವಿಕೆ ಮಾಡಿದರು. ಕ್ರಿ.ಶ.1184 ರಲ್ಲಿ ಕಲ್ಯಾಣದ ಚಾಲುಕ್ಯ ಅರಸ ನಾಲ್ಕನೆಯ ಸೋಮೇಶ್ವರನ ದಂಡನಾಯಕ ಬಮ್ಮರಸನು ಕಳಚೂರಿಗಳನ್ನು ಪುನಃ ರಾಜಕೀಯ ರಂಗದಿಂದ ಸರಿಸಿ ಅಧಿಕಾರವನ್ನು ಪಡೆದುಕೊಂಡರು. ಹೀಗೆ ಸು.3 ದಶಕಗಳ ಕಾಲ ರಾಜ್ಯಭಾರದ ಸಮಯದಲ್ಲಿ ವಿವಿಧ ಧರ್ಮಗಳ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡುತ್ತಾ, ಧಾರ್ಮಿಕ ಪ್ರಗತಿಯನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ ಎಂಬುದನ್ನು ಅವರ ಶಾಸನಗಳಿಂದ ತಿಳಿದುಕೊಳ್ಳುವುದೇ ಈ ಲೇಖನದ ಮೂಲ ಉದ್ದೇಶವಾಗಿದೆ.

ಧರ್ಮ ಎಂಬ ಪದವು ಲ್ಯಾಟಿನ ಭಾಷೆಯ 'ರಿಲಿಗೋ' ಎಂಬುದರ ರೂಪಾಂತರವಾಗಿ ಆಂಗ್ಲ ಭಾಷೆಯ 'ರಿಲೀಜನ್' ಎಂಬ ಪದವು ನಿಷ್ಪನ್ನವಾಗಿದೆ. ಇದಕ್ಕೆ ಸಮಾನಾಂತರದಲ್ಲಿರುವ ಕನ್ನಡ ಪದವೇ 'ಧರ್ಮ'. ಕಳಚೂರಿ ಮನೆತನದ ಅರಸರು ಹಿಂದೂ ಧರ್ಮಗಳ ಅಂಗಗಳಾದ ಶೈವ, ವೈಷ್ಣವ ಧರ್ಮಗಳಂತೆ ಜೈನ ಧರ್ಮ ಸಂಪ್ರದಾಯಗಳಿಗೂ ಆಶ್ರಯವನ್ನು ನೀಡದ್ದರೆಂಬುದು ಅವರ ಕಾಲದಲ್ಲಿ ಹೊರಡಿಸಲಾದ ಶಾಸನಗಳಿಂದ ತಿಳಿಯಬಹುದಾಗಿದೆ.

ಕರ್ನಾಟಕದಲ್ಲಿ ಒಟ್ಟು 328 ಶಾಸನಗಳು, ಆಂಧ್ರದಲ್ಲಿ 07, ತಮಿಳುನಾಡಿನಲ್ಲಿ 01, ಮಹಾರಾಷ್ಟ್ರದಲ್ಲಿ 41 ಶಾಸನಗಳು ಇದುವರೆಗೂ ಲಭ್ಯವಾಗಿವೆ. ಅವುಗಳಲ್ಲಿ ಕರ್ನಾಟಕದಲ್ಲಿ ದೊರೆತಿರುವ ಶಾಸನಗಳ ಪ್ರಕಾರ ಧರ್ಮಗಳ ಬೆಳವಣಿಗೆ ಯಾವ

Scanned with OKEN Scanner

## ಕಲ್ಯಾಣದ ಕಳಚೂರಿಗಳು ಹೊರಡಿಸಿದ ಶಾಸನಗಳು

| ಅ.ನಂ | ಜಿಲ್ಲೆ | ಶಾಸನಗಳು | ಶೈವ ಶಾಸನಗಳು | ವೈಷ್ಣವ ಶಾಸನಗಳು | ಜೈನ ಶಾಸನಗಳು | ವೀರಗಲ್ಲುಗಳು | ಶೈವ +ವೈಷ್ಣವ |
|---|---|---|---|---|---|---|---|
| 01 | ಬಾಗಲಕೋಟೆ | 12 | 10 | 01 | 03 | | |
| 02 | ವಿಜಯಪುರ | 64 | 51 | 07 | 01 | 01 | 03 |
| 03 | ರಾಯಚೂರು | 15 | 09 | 02 | 01 | | 03 |
| 04 | ದಾವಣಗೆರೆ | 08 | 04 | | – | | 04 |
| 05 | ಹಾವೇರಿ | 41 | 25 | 02 | 02 | 08 | 02 |
| 06 | ಬಳ್ಳಾರಿ | 04 | 04 | | 01 | | |
| 07 | ಶಿವಮೊಗ್ಗ | 66 | 37 | | 02 | 31 | 04 |
| 08 | ಕೊಪ್ಪಳ | 10 | 08 | 01 | | | 02 |
| 09 | ಗದಗ | 35 | 26 | 04 | 01 | | 02 |
| 10 | ಕಲ್ಬುರ್ಗಿ | 25 | 23 | 01 | 03 | | 01 |

ಕಲ್ಯಾಣದ ಕಳಚೂರಿಗಳು ಹೊರಡಿಸಿದ ಶಾಸನಗಳು

| ಅ.ನಂ | ಜಿಲ್ಲೆ | ಶಾಸನಗಳು | ಶೈವ ಶಾಸನಗಳು | ವೈಷ್ಣವ ಶಾಸನಗಳು | ಜೈನ ಶಾಸನಗಳು | ವೀರಗಲ್ಲುಗಳು | ಶೈವ+ವೈಷ್ಣವ |
|---|---|---|---|---|---|---|---|
| 011 | ಯಾದಗಿರಿ | 17 | 15 | 03 | | | 02 |
| 12 | ಬೆಳಗಾವಿ | 14 | 10 | 03 | 01 | | |
| 13 | ಧಾರವಾಡ | 14 | 12 | 01 | | | 01 |
| 14 | ಬೀದರ | 01 | 01 | | | | |
| 15 | ಉತ್ತರ ಕನ್ನಡ | 02 | 01 | | | | |
| | ಒಟ್ಟು | 328 | 236 | 25 | 15 | 40 | 24 |

Scanned with OKEN Scanner

ರೀತಿಯಾಗಿ ಬೆಳೆದುಕೊಂಡು ಬಂದಿತ್ತು ಎಂಬುದನ್ನು ಪರಿಚಯಿಸಲು ಪ್ರಯತ್ನಿಸಲಾಗಿದೆ. ಮೇಲಿನ ಪಟ್ಟಿಯನ್ನು ಅವಲೋಕಿಸಲಾಗಿ ಕರ್ನಾಟಕದಲ್ಲಿ ದೊರೆತಿರುವ 328 ಶಾಸನಗಳಲ್ಲಿ 236 ಶಾಸನಗಳು ಶೈವ, 25 ಶಾಸನಗಳು ವೈಷ್ಣವ ಮತ್ತು 15 ಶಾಸನಗಳು ಜೈನ ಧರ್ಮಕ್ಕೆ ಸಂಬಂಧಿಸಿದ ಶಾಸನಗಳಾಗಿವೆ. ಆದರೆ ಈ ಶಾಸನಗಳಲ್ಲಿ ಕೆಲವು ಶಾಸನಗಳು ಶೈವ ಮತ್ತು ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ 24 ಶಾಸನಗಳು ಲಭ್ಯವಾಗಿವೆ. ಇದರಿಂದ ಅಂದು ಜೈನ ಮತ್ತು ವೈಷ್ಣವ ಧರ್ಮಗಳಿಗಿಂತ ಶೈವ ಧರ್ಮವು ಹೆಚ್ಚು ಪ್ರಭಲವಾಗಿತ್ತು ಎನ್ನಬಹುದಾಗಿದೆ. ವಿಜಯಪುರ ಜಿಲ್ಲೆಯಲ್ಲಿ ಅಂದು ಶೈವಧರ್ಮ ಹೆಚ್ಚು ಪ್ರಾಭಲ್ಯತೆಯಿಂದ ಕೂಡಿದ್ದರೆ. ಬೀದರ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಅಷ್ಟೊಂದು ಕಳಚೂರಿಗಳ ಕಾಲದಲ್ಲಿ ಪ್ರಭಾವ ಬೀರಿಲ್ಲವೆಂಬುದು ತಳಿಯಬಹುದಾಗಿದೆ. ಅಂದರೆ ವಿಜಯಪುರ ಜಿಲ್ಲೆಯಲ್ಲಿ 51 ಶೈವ ಶಾಸನಗಳು ಮತ್ತು 03 ಶೈವ ಮತ್ತು ವೈಷ್ಣವ ಧರ್ಮಗಳ ಮಿಶ್ರಣ ಮಾಹಿತಿಯನ್ನು ಕೊಡಬಹುದಾದ ಶಾಸನಗಳು ಲಭ್ಯವಾಗಿದ್ದರೆ ಬೀದರ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇವಲ ತಲಾ ಒಂದು ಶಾಸನ ಲಭ್ಯವಾಗಿದೆ. ಇದರಿಂದ ಕಳಚೂರಿಗಳ ಆಳ್ವಿಕೆ ಬಹುಮಟ್ಟಿಗೆ ಶಿವಮೊಗ್ಗ ಮತ್ತು ವಿಜಯಪುರ ಜಿಲ್ಲೆಯವರೆಗೆ ವಿಸ್ತ್ರತವಾಗಿರಬಹುದು ಎಂದು ತಿಳಿಯಲಾಗಿದೆ. ವಿಜಯಪುರದ ನಂತರ ಹಾವೇರಿ, ಕಲ್ಬುರ್ಗಿ, ಗದಗ ಜಿಲ್ಲೆಗಳಲ್ಲಿಯೂ ಬಹುಮಟ್ಟಿಗೆ ಶೈವ ಧರ್ಮ ಪ್ರಗತಿಯನ್ನು ಹೊಂದಿದೆ ಎಂಬುದನ್ನು ತಿಳಿಯಬಹುದಾಗಿದೆ.

## ಕಳಚೂರಿಗಳ ಕಾಲದ ಧಾರ್ಮಿಕ ಶಾಸನಗಳು

ಕಲ್ಯಾಣದ ಕಳಚೂರಿ ಅರಸರು ಕೇವಲ ಒಂದೇ ಧರ್ಮಕ್ಕೆ ಪ್ರೋತ್ಸಾಹವನ್ನು ನೀಡದೆ ಸರ್ವಧರ್ಮಗಳ ಸಮನ್ವಯದ ಅರಸರಾಗಿದ್ದರು ಎಂಬುದಕ್ಕೆ ಮೇಲಿನ ಪಟ್ಟಿಕೆಯಲ್ಲಿ ಗುರುತಿಸಲಾದ ಶಾಸನಗಳೇ ಪೂರಕವಾಗಿವೆ. ಅವರು ಶೈವ, ವೈಷ್ಣವ ಹಾಗೂ ಜೈನ ಧರ್ಮಗಳ ಪ್ರಗತಿಗೆ ಆಧ್ಯತೆಯನ್ನು ನೀಡಿದ್ದರೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದರಲ್ಲೂ ಅಂದು ಶೈವ ಧರ್ಮವು ಹೆಚ್ಚು ಅಭಿವೃದ್ಧಿಯನ್ನು ಪಡೆದುಕೊಂಡಿತ್ತು ಎಂಬುದು ದೊರೆತಿರುವ ಶಾಸನಗಳಿಂದ ತಿಳಿಯಬಹುದಾಗಿದೆ. ಅಂದು ಆರಂಭಿಕ ಅರಸರಾದ ಕನ್ನಮ, ಜೋಗಮ

Scanned with OKEN Scanner

| | ಕನ್ನಮ | | ಜೋಗಮ | | | ಪೆರ್ಮಾಡಿ | | | ಬಿಜ್ಜಳ | | | ಸೋವಿದೇವ | | | ಮಲ್ಲುಗಿ | | | ಅಹವಮಲ್ಲ | | | ಸಂಕಮ | | | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | ವ ಶೈ | ವ ವೈಷ್ಣ | ನ ಜೈ | ವ ಶೈ | ವ ವೈಷ್ಣ | ನ ಜೈ | ವ ಶೈ | ವ ವೈಷ್ಣ | ನ ಜೈ | ವ ಶೈ | ವ ವೈಷ್ಣ | ನ ಜೈ | ವ ಶೈ | ವ ವೈಷ್ಣ | ನ ಜೈ | ವ ಶೈ | ವ ವೈಷ್ಣ | ನ ಜೈ | ವ ಶೈ | ವ ವೈಷ್ಣ | ನ ಜೈ | ವ ಶೈ | ವ ವೈಷ್ಣ | ನ ಜೈ |
| ವಿಜಯಪುರ | 03 | | | 01 | | | 03 | | | 18 | 05 | | 17 | 04 | | 03 | | | 02 | | | 05 | 02 | |
| ಬಾಗಲಕೋಟ | | | | | | | 01 | | | 06 | | 01 | 01 | | 02 | | | | | | | 02 | 01 | |
| ಬೆಳಗಾವಿ | | | | 01 | | | | | | 04 | 02 | 01 | 03 | | 02 | | | | 02 | | | | 01 | |
| ಧಾರವಾಡ | | | | | | | | | | 04 | 02 | | 06 | 01 | | | | | 01 | 01 | | 02 | 01 | |
| ಗದಗ | | | | | | | | | | 10 | 01 | | 08 | 03 | 01 | | | | 01 | | | 09 | 03 | |
| ರಾಯಚೂರ | | | | | | | | | | 01 | | 01 | 08 | 01 | | | | | 01 | 01 | | 02 | 01 | |
| ಕಲ್ಬುರ್ಗಿ | 01 | | | | | | | | | 05 | | | 14 | 02 | 03 | 01 | | | | | | 03 | | |
| ಯಾದಗಿರಿ | | | | | | | | | | 03 | 01 | | 04 | 01 | | | | | 03 | 01 | | 08 | | |
| ಕೊಪ್ಪಳ | | | | | | | | | | 01 | | | 04 | 01 | | | | | 01 | 01 | | 04 | 01 | |
| ದಾವಣಗೆರೆ | | | | | | | | | | 04 | 01 | | 01 | 01 | | | | | | | | 02 | | |
| ಶಿವಮೊಗ್ಗ | | | | | | | | | | 25 | 01 | | 10 | | 01 | | | | | | 01 | 04 | | |
| ಬಳ್ಳಾರಿ | | | | | | | | | | 01 | | 01 | 01 | 01 | | | | | | | | 02 | | |
| ಹಾವೇರಿ | | | | | | | | | | 13 | | 02 | 09 | | | | | | | | | 02 | | |
| ಬೀದರ | | | | | | | | | | | | | 01 | | | | | | | | | | | |
| ಉತ್ತರ ಕನ್ನಡ | | | | | | | | | | 01 | | | 01 | | | | | | | | | | | |
| ಒಟ್ಟು | 04 | | | 02 | | | 04 | | | 96 | 13 | 06 | 88 | 15 | 07 | 04 | | | 11 | 04 | 01 | 45 | 10 | |

ಮತ್ತು ಪೆರ್ಮಾಡಿ, ಮಲ್ಲುಗಿ ಅರಸರ ಕಾಲದಲ್ಲಿ ವೈಷ್ಣವ ಮತ್ತು ಜೈನಧರ್ಮಸಂಬಂಧಿಸಿದ ಶಾಸನಗಳು ಲಭ್ಯವಾಗಿರುವುದಿಲ್ಲ. ಆದರೆ ಬಿಜ್ಜಳ ಅರಸನ ಕಾಲಕ್ಕೆ 96 ಶೈವ, 13 ವೈಷ್ಣವ, 06 ಜೈನ ಶಾಸನಗಳು, ಸೋವಿದೇವನ ಕಾಲಕ್ಕೆ 88 ಶೈವ, 15 ವೈಷ್ಣವ, 07 ಜೈನ ಶಾಸನಗಳು, ಅಹವಮಲ್ಲ ಅರಸನ ಕಾಲಕ್ಕೆ 11 ಶೈವ, 04 ವೈಷ್ಣವ ಹಾಗೂ ಸಂಕಮನ ಕಾಲಕ್ಕೆ 45 ಶೈವ, 10 ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಶಾಸನಗಳು ಲಭ್ಯವಾಗಿರುವುದರಿಂದ ಈ ಅರಸರ ಕಾಲದಲ್ಲಿ ಶೈವ ಧರ್ಮ ಹೆಚ್ಚು ಪ್ರಭಲವಾಗಿದ್ದು, ವೈಷ್ಣವ ಧರ್ಮಕ್ಕೆ ಎರಡನೆಯ ಸ್ಥಾನ ನೀಡಿದ್ದರೆ, ಜೈನ ಧರ್ಮವು ಮಂದಗತಿಯಿಂದ ಬೆಳೆಯುತ್ತಿತ್ತು ಎಂಬುದು ಶಾಸನಗಳಿಂದ ತಿಳಿದುಬರುತ್ತವೆ. ಕೆಲವು ಸಂದರ್ಭದಲ್ಲಿ ಶೈವ ಮತ್ತು ವೈಷ್ಣವ, ಶೈವ ಮತ್ತು ಜೈನ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಯು ಒಂದೇ ಶಾಸನದಿಂದಲೂ ತಿಳಿದುಬರುವಂತೆ ಮಾಹಿತಿಗಳಿಂದ ಕೂಡಿದ ದಾಖಲೆಗಳಿವೆ.

**ಕಳಚೂರಿಗಳ ಕಾಲದ ಶೈವ ಶಾಖೆಗಳು :**

ಕಳಚೂರಿಗಳ ಕಾಲಾವಧಿಯಲ್ಲಿ ಶೈವಧರ್ಮ ಮತ್ತು ಅದರ ವಿವಿಧ ಶಾಖೆಗಳಾದ ಕಾಳಾಮುಖ, ಕಾಪಾಲಿಕ ಮತ್ತು ಪಾಶುಪತ ಶಾಖೆಗಳನ್ನು ಬೆಳೆಸಿದರು. ಅವರ ಶಾಸನಗಳ ಆಧಾರದ ಮೇಲೆ ಹೇಳುವುದಾದರೆ ಹೆಚ್ಚಾಗಿ ಕಾಳಾಮುಖ ಶೈವಸಂಪ್ರದಾಯಕ್ಕೆ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿತ್ತು ಎಂಬುದು ತಿಳಿಯುವುದು. ಕಲಚೂರಿಗಳ ಕಾಲಕ್ಕೆ ಸೇರಿದ ಸುಮಾರು 25 ಶಾಸನಗಳಲ್ಲಿ ಕಾಳಾಮುಖ ಗುರುಗಳ ಉಲ್ಲೇಖಗಳು ಕಂಡುಬರುತ್ತವೆ. ಈ 25 ಶಾಸನಗಳಲ್ಲಿ 20 ಶಾಸನಗಳು ಕಾಳಾಮುಖ ಕುರಿತಾದ ಸ್ಪಷ್ಟವಾದ ಉಲ್ಲೇಖವಿದ್ದರೆ ಇನ್ನುಳಿದ 05 ಶಾಸನಗಳಲ್ಲಿ ಮೂರು ಕೋಣೆಯ ಸಂತತಿ ಹಾಗೂ ಭುಜಂಗಾವಳಿಯ ಉಲ್ಲೇಖವಿದೆ.

ಲಕುಳಿಶ ಎಂಬವನು ಪಾಶುಪತದ ಸಂಪ್ರದಾಯ ಶಾಖೆಯ ಸ್ಥಾಪಕನೆಂದು ತಿಳಿಯಬಹುದಾಗಿದೆ. ಇದಕ್ಕೆ ಪೂರಕವಾದ ಆಕರವೆಂದರೆ ಕ್ರಿ.ಶ. 61 ರಲ್ಲಿ ಗುಪ್ತ ಮನೆತನದ ಅರಸನಾದ ಎರಡನೆಯ ಚಂದ್ರಗುಪ್ತ ವಿಕ್ರಮಾದಿತ್ಯನು ಹೊರಡಿಸಿದ ಮಥುರಾದಲ್ಲಿರುವ ಸ್ಥಂಬ ಶಾಸನ. ಈ ಶಾಸನದಲ್ಲಿ ಲಕುಳಿಶನು ಪಾಶುಪತದ ಸ್ಥಾಪಕ ಎಂಬ ಮಾಹಿತಿಯನ್ನು ನೀಡುವುದರ ಮೂಲಕ ಕೌಶಿಕ

ಎಂಬಾತನು ಲಕುಲೀಶನ ಪ್ರಥಮ ಶಿಷ್ಯ ಎಂಬ ಉಲ್ಲೇಖವಿದೆ. ಲಕುಳಿಶನ್ನು ಬೇರೆ ಬೇರೆ ಹೆಸರುಗಳಿಂದ ಅಂದರೆ ಲಕುಳೀಶ, ನಕುಳೀಶ, ಲಕುಳಿನ್, ಲಕುಳೀಶ್ವರ ಎಂಬ ಹೆಸರುಗಳಿಂದ ಕರೆಯಲಾಗಿದೆ.

ಪಾಶುಪತರು ಸಿಂಹಪರ್ಷೆಗೆ ಸೇರಿದವರಾಗಿದ್ದರೆ ಕಾಳಾಮುಖರು ಶಕ್ತಿಪರ್ಷೆಗೆ ಸೇರಿದವರಾಗಿದ್ದಾರೆ. ಶಾಸನಗಳು ಕಾಳಾಮುಖರನ್ನು ಶಕ್ತಿಪರ್ಷೆಯೊಂದಿಗೆ ಗುರುತಿಸುತ್ತವೆ. ಕರ್ನಾಟಕದಲ್ಲಿ ಶಕ್ತಿಪರ್ಷೆಯ ಮೊದಲ ಉಲ್ಲೇಖ ಸಿಗುವುದು ಸೊರಬ ತಾಲೂಕಿನ ಓಟೂರು ಗ್ರಾಮದ ಕ್ರಿ.ಶ. 938 ರ ಶಾಸನದಲ್ಲಿ. ನಂತರದಲ್ಲಿ ಸಾಕಷ್ಟು ಶಾಸನಗಳು ಶಕ್ತಿಪರ್ಷೆಯನ್ನು ಉಲ್ಲೇಖಿಸುವುದನ್ನು ನೋಡುತ್ತೇವೆ.

ಕಲ್ಯಾಣದ ಕಳಚೂರಿಗಳ ಕಾಲಕ್ಕೆ ಸಂಬಂಧಿಸಿದಂತೆ ಪಾಶುಪತ ಸಂಪ್ರದಾಯದ ಮಾಹಿತಿಯನ್ನೊಳಗೊಂಡ ಎರಡು ಶಾಸನಗಳು ಮತ್ತು ಕಾಪಾಲಿಕ ಸಂಪ್ರದಾಯದ ಮಾಹಿತಿಯನ್ನು ಒಳಗೊಂಡಿರುವ ಒಂದು ಶಾಸನವು ಮಾತ್ರ ಲಭ್ಯವಾಗಿದೆ. ಕುಕನೂರಿನ ಮಾಹಾಮಾಯಾ ದೇವಾಲಯದ ಮುಖಮಂಟಪದಲ್ಲಿರುವ ಕ್ರಿ.ಶ.13.09.1178 ರ ಕಾಲಕ್ಕೆ ಸಂಬಂಧಿಸಿದ ಶಾಸನದಲ್ಲಿ ಕಾಳಾಮುಖ ಮತ್ತು ಕಾಪಾಲಿಕ ಶಾಖೆಗಳ ಉಲ್ಲೇಖಗಳಿವೆ. ಈ ಶಾಸನದಲ್ಲಿ ದೇಶಗಳೊಳಗೆ ಕುಂತಳದೇಶವೇ ಮಿಗಿಲು ಅಲ್ಲಿ ಕಾಳಿಕಾಜ್ಯೇಷ್ಠೆ ಕಪಾಳೀಶನು ನೆಲಸಿದ ಸುಕೃತದ ರಾಶಿಗೆ ನೆಲೆಯಾದ ಮೈಮೆಯಿಂ ಭೂತಳದೊಳ್ ಎಂದು ದಾಖಲೆ, ಮುಂದುವರೆದು ಕುಕನೂರು ಬ್ರಹ್ಮಲೋಕಕ್ಕೆ ದೊರೆಯಾಯ್ತು, ಕಪಾಳೀಶ ಮಹಾಪ್ರಳಯಾಂಬೆ ನಿಜೋದ್ಭಪೀಠದೊಳು ತನ್ನೆಡದೊಳು ನೆಲೆಗೊಳೆ ಕಾಳಿಕೆ ಮೊದಲೊಳು ನೆಲೆಗೊಂಡಳು ಎಂಬ ಕಾಳಿಕೆಯ ಕುರಿತು ಮಾಹಿತಿ ಇದೆ. ಇದೇ ಶಾಸನದಲ್ಲಿ ಸೂಡಿಯ ನಗರೇಶ್ವರ ಕಾಳಾಮುಖಾನ್ವಯ ಮುನಿ ರಾಜಗುರು ಕಳೇಶ್ವರ ಪಂಡಿತನ ಉಲ್ಲೇಖವೂ ಕಂಡುಬರುತ್ತದೆ. ಇದರಿಂದ ಕುಕನೂರು ಕಾಳಾಮುಖ, ಕಾಪಾಲಿಕ ಮತ್ತು ಶಾಕ್ತಪರಂಪರೆಯ ಕೇಂದ್ರವಾಗಿತ್ತು ಎಂದೆನ್ನಬಹುದಾಗಿದೆ.

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಮುತ್ತಿಗೆಯ ಸಂಗಮೇಶ್ವರ ದೇವಾಲಯದ ಎಡಭಾಗದ ಗೋಡೆಯ ಮೇಲಿರುವ ಕ್ರಿ.ಶ.24ನೇ

Scanned with OKEN Scanner

ಮಾರ್ಚ 1147 ರ ಶಾಸನವು ಮಹಾಮಂಡಳೇಶ್ವರ ಕುಮಾರ ಬಿಜ್ಜಳದೇವನ ಕಾಲದ್ದಾಗಿದ್ದು, ಅದರಲ್ಲಿ ಸೇರಗಣಸ್ತೋಂಯುವಾನಂ ಮಹೇಶಂ ಲೋಕಾಲೋಕೈಕಬೀಜಂ ಪಶುಪತಿಶಿವಲಿಂಗಂ ಜಿತಾನಂಗನೀ ಭೂಲೋಕಕ್ಕೆ ಎಂಬ ಉಲ್ಲೇಕವಿದೆ. ಕಾಶ್ಮೀರ ಮೂಲದಿಂದ ಬಂದು ವಿಜಯಪುರದಲ್ಲಿ ನೆಲೆಸಿದ್ದ ಶೈವಗುರು ಪರಂಪರೆಗೆ ಸೇರಿದ ಲಕುಲೀಶ್ವರನನ್ನು ಶಿವರಾಜ ಚಮೂಪನು ಕಟ್ಟಿಸಿದ ಶಿವಲಿಂಗದೇವರ ದೇವಾಲಯದ ನಿರ್ವಹಣೆಗೆ ನೇಮಿಸಿದ ಉಲ್ಲೇಖವಿದೆ.

ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಕಲ್ಲೇಶ್ವರದ ದೇವಾಲಯದ ಸಮೀಪದಲ್ಲಿರುವ ಕ್ರಿ.ಶ.13ನೇ ಜನೇವರಿ 1148 ರ ಶಾಸನವು ಬಿಜ್ಜಳರಸನ ಕಾಲಕ್ಕೆ ಸಂಬಂಧಿಸಿದ್ದಾಗಿದ್ದು ; ಈ ಶಾಸನದಲ್ಲಿ ಶಿವಧರ್ಮತತ್ವ ನಿಯಮ ಅಧ್ಯಾಯನ ಬರ್ಮ್ಮಹಾಮುನಿಗಳು ಪಾಶುಪತ ಬ್ರತೋರ್ಜಿತ ತಪಶ್ರೀಮಂಡನ ಮುರ್ಕ್ತಿ ಭಾಜನರೀಶಾರ್ಚನ ತತ್ವಪರರು ಪ್ರಭುಗಳಾಜ್ಞಾ ಸಿದ್ಧರಧ್ಯಾತ್ಮವರ್ಧನ ಯೋಗೇಶ್ವರಟ್ಟಹಾಸಮುನಿಗಳು ಸಬ್ರಹ್ಮಚರಿಯಬ್ರತರು ॥ ನಿರುಪಮ ಪಾಶುಪತ ಬ್ರತ ವಿರಾಜಿತರ್ಣ್ಣಿಸ್ಪ್ರುಹರು ಶಿವಾತ್ಮಜ ಯೋಗೇಶ್ವರ ಶಿಷ್ಯರು ಎಂಬ ಮಾಹಿತಿಯು ಇದೆ.

**ಕಾಳಾಮುಖ :**

ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯು ವಸ್ತು ಸಂಗ್ರಹಾಲಯದಲ್ಲಿರುವ ಕ್ರಿ.ಶ.1181 ರ ಕಾಲದ ಅಹವಮಲ್ಲನ ಶಾಸನದಲ್ಲಿ ಪಶುಪತಿಯಿಂದಿಂತು ವರ್ತಿಪ್ಪುದಲ್ತೆ ಮತ್ತು ಶಕ್ತಿಪರುಷೆಯೊವ ನೀನುತ..... ಕರಣಬ್ರತನೋಜಂ ಭಕ್ತ, ರಾಜಗುರು ಕಲ್ಯಾಣಶಕ್ತಿದೇವರು ಎಂಬ ಮುನಿಯ ಉಲ್ಲೇಖವಿದೆ.

ಕಿಟ್ಟೇಗಾವಿ ಸಂತತಿಗೆ ಸಂಬಂಧಿಸಿದ ಒಂದು ಶಾಸನವು ಲಭ್ಯವಾಗಿದ್ದು, ಅದು ಗದಗ ಜಿಲ್ಲೆಯ ಲಕ್ಷ್ಮೇಶ್ವರದ ಶಾಸನವಾಗಿದ್ದು. ಶಿರಹಟ್ಟಿಯ ತಾಲೂಕಾ ಕಛೇರಿಯ ಆವರಣದಲ್ಲಿದೆ. ಈ ಶಾಸನದಲ್ಲಿ ಕಿಟ್ಟೇಗಾವಿ ಗುಗುಕುಳದೊಳು ವಾದಿರುದ್ರಗಳ್ದರು ತತು ಶಿಷ್ಯಸಂತಾನ ಎಂಬ ಉಲ್ಲೇಖವಿದ್ದು, ಸಕಳಾಗಮತತ್ವ ತ್ರಿಲೋಚನಪಂಡಿತದೇವರ ಹೆಸರು ದಾಖಲಾಗಿದೆ.

ಶಾಸನಗಳಲ್ಲಿ ಶೈವ-ವೈಷ್ಣವ ಮತ್ತು ಶೈವ-ಜೈನ ಧರ್ಮಗಳ ಕುರಿತಾದ ಮಾಹಿತಿಯು ಒಂದೇ ಶಾಸನದಲ್ಲಿಯೂ ದಾಖಲಾಗಿರುವುದನ್ನು ಕಾಣಬಹುದಾಗಿದೆ. ಕೆಲವೊಮ್ಮೆ ಧಾರ್ಮಿಕ ಸಂಘರ್ಷಗಳಾಗಿರುವ ಮಾಹಿತಿಯೂ ದೊರೆಯುತ್ತವೆ. ಒಂದು ಧರ್ಮದ ಪ್ರತಿಮೆಗಳನ್ನು ಒಡೆದು ಹಾಕಿ ಮತ್ತೊಂದು ಧರ್ಮದ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಆ ಧರ್ಮದ ಬೆಳವಣಿಗೆಗೆ ಪ್ರಯತ್ನಿಸುತ್ತಿದ್ದರು ಎಂಬುದು ಇವರ ಕಾಲದ ಶಾಸನಗಳಿಂದ ತಿಳಿದುಬರುವುದು. ಉದಾಹರಣೆ : ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನ ಸೋಮನಾಥ ದೇವಾಲಯದ ನವರಂಗದ ಎಡಭಾಗದಲ್ಲಿರುವ ಕ್ರಿ.ಶ. 1148 ರ ಶಾಸನದಲ್ಲಿ ಕಲಚೂರಿ ಅರಸ ಎರಡನೆಯ ಬಿಜ್ಜಳನ ಕಾಲಕ್ಕೆ ಸಂಬಂಧಿಸಿದ ಶಾಸನವಾಗಿದ್ದು ಅದರಲ್ಲಿ ಶಿವಭಕ್ತರೆಲ್ಲರೂ ಸೇರಿ ಧರ್ಮಗೋಷ್ಠಿಯನ್ನು ನಡೆಸುತ್ತಿರುವಾಗ ಅಬ್ಬಲೂರಿನ ಜೈನರೆಲ್ಲರು ಬಂದು ಮಹಾವಿವಾಧವನ್ನು ಮಾಡಿದ್ದರಿಂದ ತಂದೆಗಾದ ಅವಮಾನದಿಂದ ಕ್ರೋಧಗೊಂಡ ಏಕಾಂತ ರಾಮಯ್ಯನು ತನ್ನ ಶಿರವನ್ನೇ ಕಡಿದು ಶಿವನಿಗಾಗಿ ಅರ್ಪಿಸಿದನು ಅದು ಏಳು ದಿನಗಳ ನಂತರ ಪುನಃ ಅವನ ಶರೀರಕ್ಕೆ ಬಂದು ಸೇರುವುದು. ಇಂತಹ ರಾಮಯ್ಯನು ಅಬ್ಬಲೂರಿನಲ್ಲಿರುವ ಜೈನ ಮಂದಿರಕ್ಕೆ ಹೋಗಿ ಅಲ್ಲಿರುವ ಜೀನನನ್ನು ಒಡೆದು ಹಾಕಿ ಸೋಮೇಶ್ವರ ಲಿಂಗುವನ್ನು ಪ್ರತಿಷ್ಠಾಪಿಸಿದನು. ಇದನ್ನು ಗಮನಿಸಿದ ಬಿಜ್ಜಳನು ಜೈನರನ್ನು ಅಲ್ಲಿಂದ ಕಳುಹಿಸಿದನಲ್ಲದೇ, ರಾಮಯ್ಯನಿಗೆ ಜಯದ ಪತ್ರವನ್ನು ಕೊಟ್ಟನು ಎಂಬ ವಿವರವಾದ ಮಾಹಿತಿಯನ್ನು ನೀಡುವುದರ ಮೂಲಕ ಅಂದು ಜೈನ ಧರ್ಮದ ಅವನತಿಯ ಹಾದಿಯನ್ನು ಮತ್ತು ಶೈವಧರ್ಮದ ಪ್ರಾಭಲ್ಯತೆಯಾಗುತ್ತಿರುವುದನ್ನು ಕಾಣಬಹುದಾಗಿದೆ.

ಮೇಲಿನ ಪಟ್ಟಿಯನ್ನು ಅವಲೋಕಿಸಲಾಗಿ ಬಿಜ್ಜಳನ ಕಾಲಕ್ಕೆ ಸಂಬಂಧಿಸಿದಂತೆ ಒಟ್ಟು 9 ಶಾಸನಗಳು, ಸೋವಿದೇವನಿಗೆ ಸಂಬಂಧಿಸಿದ 03 ಶಾಸನಗಳು ಮತ್ತು ಸಂಕಮದೇವನ ಕಾಲದ 05 ಶಾಸನಗಳಲ್ಲಿ ಕಾಳಾಮುಖ ಸಂಪ್ರದಾಯಕ್ಕೆ ಸಂಬಂಧಿಸಿದ ಮಾಹಿತಯು ದೊರೆಯುತ್ತದೆ. ಇದರಲ್ಲಿ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಶಾಸನದಲ್ಲಿ ಕಾಳಾಮುಖ ಸಮಯಶಿಖಾಮನಿ ಎಂದು ಕರೆಯಲ್ಪಟ್ಟ ಮುತ್ತಿನಕಯ್ಯ ಇಂದ್ರಕೇಶ್ವರ ದೇವರ ಮಾಹಿತಿಯನ್ನು ಬರೆಯಲಾಗಿದ್ದು; ಇಂದ್ರೇಶ್ವರ ಎಂಬ ಕಾಳಾಮುಖ ಮುನಿಯು ಮರಣಾನಂತರ ಅವನ ಹೆಸರಿನಲ್ಲಿ

Scanned with OKEN Scanner

| ಚ | ಸ್ಥಳ | ತಾಲೂಕು | ಜಿಲ್ಲೆ | ಅರಸ | ಕಾಲ | ದೇವಾಲಯ | ಉಲ್ಲೇಖ |
|---|---|---|---|---|---|---|---|
| 01 | ಲಕ್ಷ್ಮೇಶ್ವರ | ಶಿರಹಟ್ಟಿ | ಗದಗ | ಬಿಜ್ಜಳ | ಕ್ರಿ.ಶ. 1161 | ರಾಮ್ಯೆದೇವರು 173 | SII. XX. No.137 P. |
| 02 | ಮನಗೂಳಿ | ಬ.ಬಾಗೇವಾಡಿ | ವಿಜಯಪುರ | ಬಿಜ್ಜಳ | ಕ್ರಿ.ಶ. 1161 | ಹನಮಂತ | S.I.I XV. No. 101 |
| 03 ಶಿ.19 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. 1162 | ಕೇದಾರೇಶ್ವರ | E.C. VII SK. 102. |
| 04 | ಹೂಲಿ | ಸವದತ್ತಿ | ಬೆಳಗಾವಿ | ಬಿಜ್ಜಳ | ಕ್ರಿ.ಶ. 1162 | ಅಂದಕೇಶ್ವರ | E.I.XVIII No. 22 |
| 05 | ಬಂದಳಿಕೆ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. 1163 | ಸೋಮೇಶ್ವರ | E.C. VII SK. 242 |
| 06 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. 1164 | | E.C. VII SK. 108 |
| 07 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. 1168 | ಕೇದಾರೇಶ್ವರ | E.C. VII SK. 92 |
| 08 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. 1168 | ಕೇದಾರೇಶ್ವರ | E.C. VII SK. 96 |
| 09 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. 1168 | ಕೇದಾರೇಶ್ವರ | E.C. VII SK. 97 |
| 10 | ರಟ್ಟಿಹಳ್ಳಿ | ಹಿರೇಕೆರೂರ | ಹಾವೇರಿ | ಸೋವಿದೇವ | ಕ್ರಿ.ಶ. 1174 | ಕದಂಬೇಶ್ವರ | K.I VI. No. 37. p. 89 |

| ಚ | ಸ್ಥಳ | ತಾಲೂಕು | ಜಿಲ್ಲೆ | ಅರಸ | ಕಾಲ | ದೇವಾಲಯ | ಉಲ್ಲೇಖ |
|---|---|---|---|---|---|---|---|
| 11 | ಬಂದಳಿಕೆ | ಶಿಕಾರಿಪುರ | ಶಿವಮೊಗ್ಗ | ಸೋವಿದೇವ | ಕ್ರಿ.ಶ. 1174 | ಬೊಮ್ಮೇಶ್ವರ | E.C. VII SK. 2236 |
| 12 | ಕುರುಗೋಡ | ಬಳ್ಳಾರಿ | ಬಳ್ಳಾರಿ | ಸೋವಿದೇವ | ಕ್ರಿ.ಶ. 1176 | ಮೂಲಸ್ಥಾನ ಶಾಸನಗಳು. | ಬಳ್ಳಾರಿಜಿಲ್ಲೆಯ ನಂ. 7. ಪು.8 |
| 13 | ಕುರುಗೋಡ | ಬಳ್ಳಾರಿ | ಬಳ್ಳಾರಿ | ಸಂಕಮದೇವ | ಕ್ರಿ.ಶ. 1177 | ಕಲಿದೇವರು | ಬಳ್ಳಾರಿ ಜಿಲ್ಲೆಯ ಶಾಸನಗಳು. ನಂ. 8. ಪು.12 |
| 14 | ಬಂಕಾಪುರ | ಶಿಗ್ಗಾವಿ | ಹಾವೇರಿ | ಸಂಕಮದೇವ | ಕ್ರಿ.ಶ. 1178 | ನಗರೇಶ್ವರ | S.I.I. XVIII. No. 290 p. 372 |
| 15 | ರೋಣ | ರೋಣ | ಗದಗ | ಸಂಕಮದೇವ | ಕ್ರಿ.ಶ. 1179 | ಚೌಮೇಶ್ವರ | E.I. XIX p.226 |
| 16 | ಹರಳಹಳ್ಳಿ | ಹಾವೇರಿ | ಹಾವೇರಿ | ಸಂಕಮದೇವ | ಕ್ರಿ.ಶ. 1181–88 | | S.I.I. XVIII. No. 296 |
| 17 | ಕುಕನೂರು | ಯಲಬುರ್ಗಾ | ಕೊಪ್ಪಳ | ಸಂಕಮದೇವ | ಕ್ರಿ.ಶ. 1178 | ನವಲಿಂಗ | ಕೊಪ್ಪಳಜಿಲ್ಲೆಯ ಶಾಸನಗಳು |

| | | | | | | | | |
|---|---|---|---|---|---|---|---|---|
| 07 | ಬಂದಳಿಕೆ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ.1163 | ಸೋಮೇಶ್ವರ | ಮಾಚಯ್ಯ ನಾಯಕ | EC. VII SK. 242. GKD À KI. 84 p185 |
| 08 | ಮುತ್ತಗಿ | ಬಾಗೇವಾಡಿ | ವಿಜಯಪುರ | ಬಿಜ್ಜಳ | ಕ್ರಿ.ಶ.1165 ನಾಚಿ ಶೆಟ್ಟಿ | ಶಿವಾಲಯ | ಚೌಡಿಶೆಟ್ಟಿ& | SII. XV. 111. GKD. KI. 106. p.227 |
| 09 | ಹಳೆನಿದಿ ನೇಗಿಲ | ಹಿರೇಕೆರೂರ | ಹಾವೇರಿ | ಬಿಜ್ಜಳ | ಕ್ರಿ.ಶ.1165 | ಮಲ್ಲಿಕಾರ್ಜುನ | ಮಹಾದೇವಣ್ಣ | KI IV. No. 13. IKP. IK.44. |
| 10 | ಬನಹಟ್ಟಿ | ನರಗುಂದ | ಗದಗ | ಬಿಜ್ಜಳ | ಕ್ರಿ.ಶ.1167 | ತೆಲ್ಲಿಗೇಶ್ವರ | ತೆಲ್ಲಿಗಸಾಸದವರು | EI. XX. P.109-122. GKD. IK. 126 |
| 11 | ಕಲ್ಲೂರು | ಸೊರಬ | ಶಿವಮೊಗ್ಗ ದೇವ | ಸೋವಿ | ಕ್ರಿ.ಶ.1168 | ಕಲಿದೇವರ | ತಾರಕಗೌಡ | EC.VII Sorab 286. GKD. IK153 |
| 12 | ರಂಜೋಳ | ಬೀದರ | ಬೀದರ | ಸೋವಿ ದೇವ | ಕ್ರಿ.ಶ.1168 | ಹೆಜ್ಜೇಶ್ವರ | ---- | KUES. VIII. No.58. GKD.IK. 156 |

| ಅ.ನಂ | ಸ್ಥಳ | ತಾಲೂಕು | ಜಿಲ್ಲೆ | ಅರಸ | ಕಾಲ | ದೇವಾಲಯ | ನಿರ್ಮಾಪಕರು | ಉಲ್ಲೇಖ |
|---|---|---|---|---|---|---|---|---|
| 13 | ಕೊಲ್ಲೂರ | ಚಿತಾಪುರ | ಕಲ್ಬುರ್ಗಿ | ಸೋವಿ ದೇವ | ಕ್ರಿ.ಶ.1169 | ಚತುರ್ಕೂಟ | ಹುಲಿದೇವ | KDI Chitapur. 16. IKP.IK. 159 |
| 14 | ಬಾಗೇವಾಡಿ | ಬಾಗೇವಾಡಿ | ವಿಜಯಪುರ | ಸೋವಿ ದೇವ | ಕ್ರಿ.ಶ.1170 | ಸೋಮನಾಥ | ರೇವಣದಂಡ ನಾಯಕ | SII. XV.113, IKP. IK.102. |
| 15 | ಅಣ್ಣಿಗೇರಿ | ನವಲಗುಂದ | ಧಾರವಾಡ | ಸೋವಿ ದೇವ | ಕ್ರಿ.ಶ.1170 | ಕೇಶವೇಶ್ವರ | ಹೊಲ್ಲರಸ | Anushasan -p.171-176, GKD. IK 176 |
| 16 | ಕಡಲೆವಾಡ | ಸಿಂದಗಿ | ವಿಜಯಪುರ | ಸೋವಿ ದೇವ | ಕ್ರಿ.ಶ.1172 | ತ್ರಿಕೂಟ | ಸಿಂಗಿದೇವರಸ | SII. XX. 154. KUES. Sindagi 49 |
| 17 | ಬೆಣಮಗಿ | ಚಿತಾಪುರ | ಕಲ್ಬುರ್ಗಿ | ಸೋವಿ ದೇವ | ಕ್ರಿ.ಶ.1173 | ಮಲ್ಲಿಕಾರ್ಜುನ | ಕಲ್ಕುಟಿಕರು | KDI Chitapur . 33 IKP. IK. 140 |
| 18 | ಅಣ್ಣಿಗೇರಿ | ನವಲಗುಂದ | ಧಾರವಾಡ | ಸೋವಿ ದೇವ | ಕ್ರಿ.ಶ.1173 | ನಾಗೇಶ್ವರ | ನಾಗಗಾವುಂಡ | SII. XV. 122. IKP. IK. 137 |

Scanned with OKEN Scanner

| | | | | | | | | |
|---|---|---|---|---|---|---|---|---|
| 19 | ಬಂದಳಿಕೆ | ಶಿಕಾರಿಪುರ | ಶಿವಮೊಗ್ಗ ದೇವ | ಸೋವಿ | ಕ್ರಿ.ಶ.1173 | ಬೊಪ್ಪೇಶ್ವರ | ಮಾಚಿಯನಾಯಕ | EC. VII SK. 236. GKDKI. 219. p.445 |
| 20 | ಕುರುಗೋಡ | ಬಳ್ಳಾರಿ | ಬಳ್ಳಾರಿ ದೇವ | ಸೋವಿ | ಕ್ರಿ.ಶ.1176 | ಕಲಿದೇವ | ಕಲ್ಲಿಶೆಟ್ಟಿ | SII. IX. Part-I No. 296. GKD. IK.250 |
| 21 | ಇಂಗಳೇಶ್ವರ | ಬಾಗೇವಾಡಿ | ವಿಜಯಪುರ | ಸೋವಿ | ಕ್ರಿ.ಶ.1176 | ಕೇದಾರೇಶ್ವರ | ಹೀಳಸೋಮ | KUES. X Bagewadi - 03. SII. XV. 129 |
| 22 | ಕವಲೂರು | ಕೊಪ್ಪಳ | ಕೊಪ್ಪಳ | ಸೋವಿ ದೇವ | ಕ್ರಿ.ಶ.1177 | ಹರಿಹರ | ಏಚಮರಾಜ | KUES. II. Koppal. 03 IKP. IK. 184 |
| 23 | ಕುರುಗೋಡ | ಬಳ್ಳಾರಿ | ಬಳ್ಳಾರಿ | ಸಂಕಮ ದೇವ | ಕ್ರಿ.ಶ.1177 | ತ್ರಿಕೂಟಾಚಲ | ಮುಮ್ಮುರಿದಂಡರು | KUES. I. Bellary-8, IKP. IK-185 |
| 24 | ತೆಕ್ಕಲಕೋಟೆ | ಬಳ್ಳಾರಿ | ಬಳ್ಳಾರಿ | | ಕ್ರಿ.ಶ. | ವಿನಾಯಕ | ಕೇತಯಸಹಾನ | KUES.I. Siraguppa. 56, IKP. IK-81 |

Scanned with OKEN Scanner

| | | | | | | | | |
|---|---|---|---|---|---|---|---|---|
| 25 | ಮಾದಾಪುರ | ಹಿರೇಕೆರೂರ | ಹಾವೇರಿ ದೇವ | ಸಂಕಮ | ಕ್ರಿ.ಶ.1179 | ಮಲ್ಲಿಕಾರ್ಜುನ | ಲಕುಮಣ್ಣನಾಯಕ | AR No. B. 454 of 1960-61. GKD 314 |
| 26 | ಹೊದಲ | ಆಳಂದ | ಕಲ್ಬುರ್ಗಿ ದೇವ | ಸಂಕಮ | ಕ್ರಿ.ಶ.1181 | ಪ್ರಸನ್ನರಾಮೇಶ್ವರ | ಮಲ್ಲಿದೇವರಸ | KDI Alanda No. 26. IKP. IK. 209 |
| 27 | ಮಿಣಜಗಿ | ಮುದ್ದೇಬಿಹಾಳ | ವಿಜಯಪುರ ದೇವ | ಸಂಕಮ | ಕ್ರಿ.ಶ.1180 | ತ್ರಿಕೂಟಾಚಲ | ಮಾಚಿರಾಜ | SII. XV. No. 58. KUES. Mud-37 |
| 28 | ಬಬಲೇಶ್ವರ | ವಿಜಯಪುರ | ವಿಜಯಪುರ | | ಕ್ರಿ.ಶ. | ಮೂಲಸ್ಥಾನ | ರಾಜಪ್ರಭು | SII XX. 171. KUES X. Indi. No. 12 |

ಮಾಹಿತಿಗಳನ್ನು ಗುರುತಿಸಬಹುದಾಗಿದೆ. ಅಲ್ಲದೇ ಶಾಸನಗಳನ್ನು ಬರೆಯುವಾಗ ಅರಸರ ಪ್ರಶಸ್ತಿ, ಅವರ ಬಿರುದಾವಳಿಗಳು ಮತ್ತು ತಮ್ಮ ತಮ್ಮ ಧರ್ಮಗಳಿಗೆ ಸಂಬಂಧಿಸಿದ ಶ್ಲೋಕಗಳನ್ನು ಬರೆಯುವ ಸಂಪ್ರದಾಯವಿರುದನ್ನು ಕಾಣಬಹುದಾಗಿದೆ. ನಮುಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ' ಎಂಬ ಸ್ತುತಿಯಿಂದ ಆರಂಭಿಸುವುದು ಸಾಮಾನ್ಯ. ಅಲ್ಲದೇ ಕೆಲವು ಶಾಸನಗಳಲ್ಲಿ ಓಂ ನಮಃ ಶಿವಾಯ ಎಂಬ ಮಂತ್ರದೊಂದಿಗೆ, ಮತ್ತೆ ಕೆಲವು ಶಾಸನಗಳಲ್ಲಿ ಓಮ್ ನಮಃ ಶಿವಾಭ್ಯಾಂ ಸಾನುಚರಾಭ್ಯಾಂ ಎಂಬ ಬರಹವನ್ನು ಹೊಂದಿರುತ್ತವೆ.ಶಾಸನ ಆರಂಭಿಸುವದು ಸಾಮಾನ್ಯ.

ವೈಷ್ಣವ ಶಾಸನಗಳಿದ್ದರೆ 'ಜಯತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ ದಕ್ಷಿಣೋನ್ನತದಂಷ್ಟ್ರಾಗ್ರಂ ವಿಶ್ರಾಂತಭುವನಂ ವಪು' ಎಂಬ ಸ್ತುತಿ ಮತ್ತೆ ಕೆಲವು ಶಾಸನಗಳಲ್ಲಿ ಓಂ ನಾರಾಯಣಾಯ ನಮಾ ॥ ಸಕಳ ಜಗದಧೀಶಃ ಗೋಮಿನೀ ಜೀವಿತೇಶಃ ವಿಜಿತ ದನುಜಬೃಂದೋ ದೇವದೇವೋ ಮುಕುಂದ ಃ ಎಂಬ ಸ್ತುತಿ ಸಾಮಾನ್ಯವಾಗಿರುವುದು.. ಜೈನ ಶಾಸನಗಳಿದ್ದರೆ ಶ್ರೀಮತ್ಪರಮಗಂಭೀರಸ್ವಯಾದ್ವಾದಾಮೋಘಲಾಂಛನಂ ಜೀಯಾ ತ್ರೈಲೋಕ್ಯನಾಥಸ್ಯ ಶಾಸನಂ ಜೀನಶಾಸನಂ' ಎಂಬ ಸ್ತುತಿ ಕೊರೆದಿರುವುದನ್ನು ಹೆಚ್ಚಾಗಿ ಕಾಣಬಹುದಾಗಿದೆ.

**ಶಾಸನಗಳಲ್ಲಿ ಕಾಳಾಮುಖ ಶೈವಪರಂಪರೆ**

ಶಾಸನಗಳ ಕೊನೆಯಲ್ಲಿ ಗಂಗೆ ವಾರಣಾಸಿ ಕುರುಕ್ಷೇತ್ರಗಳಲ್ಲಿ ಸಾವಿರ ಬ್ರಾಹ್ಮಣರ ಮತ್ತು ಕವಿಲೆಗಳನ್ನು ಕೊಂದ ಪಾಪಕ್ಕೆ ಹೋಹರು ಮತ್ತು ಈ ಧರ್ಮಕ್ಕ್ಯಾರೋರ್ವರು ನ್ಯಾಯಮಂ ಚಿಂತಿಸಿದವರ್ಗೆ ಕುರುಕ್ಷೇತ್ರ ಪ್ರಯಾಗೆ ವಾರಣಾಸಿಯೆಂಬ ತೀರ್ಥ ಸ್ಥಾನಂಗಳೊಳ್ ಸಹಸ್ತವೇದ ಪಾರಗರಪ್ಪ ಬ್ರಾಹ್ಮಣರಂ ಕೊಂದಂತಪ್ಪ ಪಾಪಮಕ್ಕ ಎಂಬ ಶಾಪಾಶಯಗಳಿರುವುದು ಸಾಮಾನ್ಯ. ಶಾಸನಗಳಲ್ಲಿ ಶೈವ ಮುನಿಗಳಾದ ವಾಮಶಕ್ತಿ. ಜ್ಞಾನಶಕ್ತಿ, ಕಲ್ಯಾಣಶಕ್ತಿ, ಅಮೃತರಾಶಿಪಂಡಿತ, ಚಂದ್ರರಾಶಿಪಂಡಿತರ ಉಲ್ಲೇಖಗಳು ಪದೇ ಪದೇ ಬರುತ್ತಿವೆ. ಅಂದು ಬಳ್ಳಿಗಾವಿಯ ಕೋಡಿಮಠವು ಕಾಳಾಮುಖ ಶೈವ ಸಂಪ್ರದಾಯದ ಪ್ರಮುಖ ಕೇಂದ್ರವಾಗಿತ್ತು.

Scanned with OKEN Scanner

| ಅ.ನಂ | ಸ್ಥಳ | ತಾಲೂಕು | ಜಿಲ್ಲೆ | ಅರಸ | ಕಾಲ | | ದೇವಾಲಯ | ಮುನಿಗಳು | ಉಲ್ಲೇಖ |
|---|---|---|---|---|---|---|---|---|---|
| 01 | ಲಕ್ಷ್ಮೇಶ್ವರ | ಶಿರಹಟ್ಟಿ | ಗದಗ | ಬಿಜ್ಜಳ | ಕ್ರಿ.ಶ. | 1161 | ರಾಮ್ಯೆದೇವರು | ವಾಮಶಕ್ತಿ, ದೇವರಾಶಿ ಪಂಡಿತ | SII. XX. No.137 P. 173 |
| 02 | ಮನಗೂಳಿ | ಬ.ಬಾಗೇವಾಡಿ | ವಿಜಯಪುರ | ಬಿಜ್ಜಳ | ಕ್ರಿ.ಶ. | 1161 | ಹನಮಂತ ಪಂಡಿತ | ಸದ್ಯೋಜಾತ 101 | S.I.I XV. No. |
| 03 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. | 1162 | ಕೇದಾರೇಶ್ವರ | ಗೌತುಮಮುನಿ 102. p.19 | E.C. VII SK. |
| 04 | ಹೂಲಿ | ಸವದತ್ತಿ | ಬೆಳಗಾವಿ | ಬಿಜ್ಜಳ | ಕ್ರಿ.ಶ. | 1162 | ಅಂದಕೇಶ್ವರ | | E.I.XVIII No.22 |
| 05 | ಬಂದಳಿಕೆ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. | 1163 | ಸೋಮೇಶ್ವರ | ದೇವಶಕ್ತಿ | E.C. VII SK. 242 |
| 06 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. | 1164 | | ವಾಮಶಕ್ತಿ | E.C. VII SK. 108 |
| 07 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. | 1168 | ಕೇದಾರೇಶ್ವರ | ವಾಮಶಕ್ತಿ | E.C. VII SK. 92 |
| 08 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. | 1168 | ಕೇದಾರೇಶ್ವರ | ವಾಮಶಕ್ತಿ | E.C. VII SK. 96 |
| 09 | ಬಳ್ಳಿಗಾವಿ | ಶಿಕಾರಿಪುರ | ಶಿವಮೊಗ್ಗ | ಬಿಜ್ಜಳ | ಕ್ರಿ.ಶ. | 1168 | ಕೇದಾರೇಶ್ವರ | | E.C. VII SK. 97 |
| 10 | ರಟ್ಟಿಹಳ್ಳಿ | ಹಿರೇಕೆರೂರ | ಹಾವೇರಿ ದೇವ | ಸೋವಿ | ಕ್ರಿ.ಶ. | 1174 | ಕದಂಬೇಶ್ವರ ದೇವರು | ಕಲ್ಯಾಣಶಕ್ತಿ | K.I VI. No.37. p. 89 |
| 11 | ಬಂದಳಿಕೆ | ಶಿಕಾರಿಪುರ | ಶಿವಮೊಗ್ಗ | ಸೋವಿ ದೇವ | ಕ್ರಿ.ಶ. | 1174 | ಬೊಮ್ಮೇಶ್ವರ | ದೇವಶಕ್ತಿದೇವರು | E.C.VII SK. 2236 |
| 12 | ಕುರುಗೋಡ | ಬಳ್ಳಾರಿ | ಬಳ್ಳಾರಿ | ಸೋವಿ | ಕ್ರಿ.ಶ. | 1176 | ಮೂಲಸ್ಥಾನ | ಅಮೃತರಾಶಿಮುನಿ | ಬಳ್ಳಾರಿ ಜಿಲ್ಲೆಯ ಶಾಸನಗಳು. ನಂ. 7. ಪು.8 |

Scanned with OKEN Scanner

| ಅ.ನಂ | ಸ್ಥಳ | ತಾಲೂಕು | ಜಿಲ್ಲೆ | ಅರಸ | ಕಾಲ | ದೇವಾಲಯ | ಮುನಿಗಳು | ಉಲ್ಲೇಖ |
|---|---|---|---|---|---|---|---|---|
| 13 | ಕುರುಗೋಡ | ಬಳ್ಳಾರಿ | ಬಳ್ಳಾರಿ ದೇವ | ಸಂಕಮ | ಕ್ರಿ.ಶ. 1177 | ಕಲಿದೇವರು | ಶಾಸನಗಳು. 8. | ಬಳ್ಳಾರಿ ಜಿಲ್ಲೆಯ |
| 14 | ಬಂಕಾಪುರ | ಶಿಗ್ಗಾವಿ | ಹಾವೇರಿ | ಸಂಕಮ ದೇವ | ಕ್ರಿ.ಶ. 1178 | ನಗರೇಶ್ವರ | | S.I.I. XVIII. No. 290 p. 372 |
| 15 | ರೋಣ | ರೋಣ | ಗದಗ | ಸಂಕಮ | ಕ್ರಿ.ಶ. 1179 | ಚೌಮೇಶ್ವರ | ಗುರುಭಕ್ತದೇವ | E.I. XIX p.226 |
| 16 | ಹರಳಹಳ್ಳಿ | ಹಾವೇರಿ | ಹಾವೇರಿ | ಸಂಕಮ | ಕ್ರಿ.ಶ. 1181,88 | | | S.I.I. XVIII. No. 296 |
| 17 | ಕುಕನೂರು | ಯಲಬುರ್ಗಾ | ಕೊಪ್ಪಳ | ಸಂಕಮ | ಕ್ರಿ.ಶ. 1178 | ನವಲಿಂಗ | ಯೋಗೇಶ್ವರ ದೇವರು | ಕೊಪ್ಪಳಜಿಲ್ಲೆಯ ಶಾಸನಗಳು |

**ವೈಷ್ಣವ ಧರ್ಮ :**

ಕಳಚೂರಿ ಅರಸರು ಹೊರಡಿಸಿದ ಶಾಸನಗಳನ್ನು ಅವಲೋಕಿಸಿದಾಗ ವಿಜಯಪುರ ಜಿಲ್ಲೆಯಲ್ಲಿ 07, ಗದಗ ಜಿಲ್ಲೆಯಲ್ಲಿ 04, ರಾಯಚೂರು, ಹಾವೇರಿ, ಬೆಳಗಾವಿ, ಯಾದಗಿರಿ ಜಿಲ್ಲೆಗಳಲ್ಲಿ ತಲಾ 02 ಶಾಸನಗಳು, ಕಲ್ಬುರ್ಗಿ, ಬಾಗಲಕೋಟ, ಧಾರವಾಡ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ತಲಾ 01 ರಂತೆ ವೈಷ್ಣವ ಶಾಸನಗಳು ಲಭ್ಯವಾಗಿವೆ, ಇದರಿಂದ ಶೈವ ಧರ್ಮದಷ್ಟು ವೈಷ್ಣವ ಧರ್ಮವು ಪ್ರಭಲವಾಗಿರಲಿಲ್ಲ ಎಂದು ನಿರ್ಧರಿಸಬಹುದಾಗಿದೆ. ಪೆರ್ಮಾಡಿ, ಬಿಜ್ಜಳ, ಸೋವಿದೇವ, ಸಂಕಮ, ಅಹವಮಲ್ಲರಂಥ ಅರಸರನ್ನು ಹೊರತು ಪಡಿಸಿದರೆ ಉಳಿದ ಯಾವ ಕಳಚೂರಿ ಅರಸರೂ ವೈಷ್ಣವ ಧರ್ಮ ಪ್ರಸಾರಕ್ಕೆ ಹೆಚ್ಚು ಆಧ್ಯತೆಯನ್ನು ನೀಡಿರಲಿಲ್ಲ ಎಂಬ ಮಾಹಿತಿಯು ಶಾಸನಗಳಿಂದ ತಿಳಿದುಬರುತ್ತದೆ. ಅಲ್ಲದೇ ಅಂದು ವೈಷ್ಣವ ದೇವಾಲಯುಗಳ ನಿರ್ಮಾಣವಾಗಿರುವುದು ಕಡಿಮೆ. ಕೇವಲ 04 ದೇವಾಲಯುಗಳು ನಿರ್ಮಾಣಗೊಂಡಿವೆ. ಉಳಿದಂತೆ ಕೆಲವು ವೈಷ್ಣವ ಶಾಸನಗಳಲ್ಲಿ ಜೀರ್ಣೋದ್ಧಾರವಾಗಿರುವ ಮಾಹಿತಿಯು ಲಭ್ಯವಾಗಿವೆ. ಆದರೆ ವೈಷ್ಣವ ಮಹಾಜನರು ಶೈವ ಮತ್ತು ಜೈನ ಮಂದಿರಗಳಿಗೆ ದತ್ತಿ ದಾನಗಳನ್ನು ನೀಡಿರುವ ಉದಾಹರಣೆಗಳು ಶಾಸನಗಳಿಂದ ಸ್ಪಷ್ಟವಾಗುತ್ತವೆ. ಇದರಿಂದ ಅಂದಿನ ಸಮಾಜದಲ್ಲಿ ಕೆಲವು ಸಂದರ್ಭಗಳನ್ನು ಹೊರತುಪಡಿಸಿದರೆ ಸರ್ವ ಧರ್ಮದವರೂ ಒಂದಾಗಿ ಸಾಮರಸ್ಯದಿಂದ ಜೀವನ ಸಾಗಿಸುತ್ತಿದ್ದರೆಂದು ತಿಳಿಯಬಹುದಾಗಿದೆ.

ವೈಷ್ಣವ ದೇವಾಲಯಗಳ ನಿರ್ಮಾಣದ ಪಟ್ಟಿ

| ಅ.ನಂ | ಸ್ಥಳ | ತಾಲೂಕು | ಜಿಲ್ಲೆ | ಅರಸ | ಕಾಲ | ದೇವಾಲಯ | ನಿರ್ಮಾಪಕ | ಉಲ್ಲೇಖ |
|---|---|---|---|---|---|---|---|---|
| 01 | ಬಾಗೇವಾಡಿ | ಬ.ಬಾಗೇವಾಡಿ | ವಿಜಯಪುರ | ಸೋವಿ | ಕ್ರಿ.ಶ. 1180 | ಚನ್ನಕೇಶವ ದೇವಾಲಯ | ರೇವಣನಾಯಕ | |
| 02 | ನಿಡೋಣಿ | ಸಿಂಧಗಿ | ವಿಜಯಪುರ | ಸೋವಿ | ಕ್ರಿ.ಶ. 1170 | ಸೂರ್ಯ ದೇವಾಲಯ | ವೀರಣ್ಣ | SII . XVIII. 181. GKD -KI. 166 |
| 03 | ನಿಡಗುಂದಿ | ರೋಣ | ಗದಗ | ಸೋವಿ | ಕ್ರಿ.ಶ. 1170 | ಕೇಶವ ದೇವಾಲಯ | ಗೋವಣ್ಣಯ್ಯ | SII. XV. 114. GKD KI 168 |
| 04 | ಹರಸೂರು | ಕಲ್ಬುರ್ಗಿ | ಕಲ್ಬುರ್ಗಿ | ಸೋವಿ | ಕ್ರಿ,ಶ, 1172 | ಲಕ್ಷ್ಮೀ ಮಂದಿರ | ಮಾಧವ ದಂಡನಾಥ | EI No.28, GKD. KI 206 |

Scanned with OKEN Scanner

ಕ್ರಿ.ಶ. 26ನೇ ಜೂನ 1170 ರಲ್ಲಿ ಬರೆಯಿಸಲಾದ ಸೋವಿದೇವನ ಕಾಲದ ನಿಡೋಣಿಯ ಶಾಸನದಲ್ಲಿ ನಿಡುವಳ್ಳಿ ನಿವಾಸಿಯಾದ ಬ್ರಾಹ್ಮಣ ವೀರಣ್ಣನು ಸೂರ್ಯ ಗ್ರಹವನ್ನು ಏತ್ತು ಗವೇಶ್ವರಮಂ ನಿರಾಕುಳಂ [ಕೆಡೆದೊಡೆದಿರ್ದ್ದುವಂ] ಮುಗುಳೆ ಮಾಡಿಸಿ ಕೀರ್ತಿಪಡೆದನು. ಈ ದೇವಾಲಯಗಳಿಗೆ ಪೆರಿಯಾಸೋವರಸನ ಮಗನಾದ ಬಂಧುದೇವನು ದಕ್ಷಿಣಾಯನ ಸಂಕ್ರಮಣದಂದು ಪರ್ವದ ನಿಮಿತ್ಯ ಕಾಳಿಯ ವಿಷ್ಣುಗೃಹದ ಜನಾರ್ಧನ ದೇವರಲ್ಲಿಯ ಸೋಮನಾಥದೇವರ ಸನ್ನಿಧಾನದಲ್ಲಿ ದಾನ ನೀಡಿದ ಮಾಹಿತಿ ಮತ್ತು ನಿಡೋಣಿಯ ಅಗ್ರಹಾರ ಉತ್ತಮದ ಅಗ್ರಹಾರ ಎಂದು ಉಲ್ಲೇಖಿಸಲಾಗಿದೆ.

**ಜೈನ ಶಾಸನಗಳು :**

ಕಳಚೂರಿ ಅರಸರು ಜೈನಧರ್ಮದ ಪ್ರಗತಿಗೂ ಪ್ರೋತ್ಸಾಹ ನೀಡುತ್ತಿದ್ದರು. ಇವರ ಕಾಲದಲ್ಲಿ ಹಲವಾರು ಭಾಗಗಳಲ್ಲಿ ಜೈನ ಬಸದಿಗಳು ನಿರ್ಮಾಣಗೊಂಡಿರುವ ಮಾಹಿತಿಯು ಶಾಸನಗಳಿಂದ ತಿಳಿದುಬರುತ್ತವೆ. ಉದಾಹರಣೆಗೆ : ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಏಕ್ಸಂಬಾದ ಆದಿನಾಥ ಬಸದಿಯಲ್ಲಿರುವ ಕ್ರಿ.ಶ.25ನೇ ಫೆಬ್ರುವರಿ 1165 ರ ಶಾಸನದಲ್ಲಿ ಬಿಜ್ಜಳನ ಮಹಾಪ್ರಧಾನನಾದ ಕಾಳಿಯಣ್ಣನು ನೇಮಿನಾಥಸ್ವಾಮಿಯ ಹೆಸರಿನಿಂದ ಬಸದಿಯನ್ನು ನಿರ್ಮಿಸಿದ ವಿವರ ಮತ್ತು ಗುರುಪರಂಪರೆಯನ್ನು ಈ ರೀತಿಯಾಗಿ ವಿವರಿಸಿದೆ. ಪುಂನಾಗವೃಕ್ಷ ಮೂಲಗಣದ ಕುಮಾರಕೀರ್ತಿ ಪಂಡಿತದೇವರ ಶಿಷ್ಯ, ಶ್ರೀ ವಿಜಯಕೀರ್ತಿ ಪಂಡಿತದೇವರಿಗೆ ಕಾಳಿಯಣ್ಣನು ನೇಮಿನಾಥ ಸ್ವಾಮಿಯ ಬಸದಿಯನ್ನು ಮಾಡಿಸಿ ಅಲ್ಲಿ ಪೂಜಾಧಿಕಾರ್ಯಗಳಿಗೆ, ನಂದಾದೀವಿಗೆಗೆ ದಾನ ನೀಡಿದ ವಿವರವಿದೆ.

ಮಂತಗಿಯ ಪಟ್ಟಣಸ್ವಾಮಿಯಾದ ರಾಮಬಮ್ಮಿಶೆಟ್ಟಿಯ ಮಗ ಪರಮಮಹೇಶ್ವರ ಸೆಟ್ಟಿಯು ರತ್ನದ ಪರೀಕ್ಷಕನೂ, ವ್ಯಾಪಾರಿಯೂ, ಆನೆ, ಕುದುರೆ ವ್ಯವಹಾರದವನಾಗಿದ್ದ ಈತನು ತನಗೆ ಬಂದ ಆದಾಯದಲ್ಲಿ ಜೈನ ಮಂದಿರವನ್ನು ನಿರ್ಮಿಸಿದನು ಎಂಬ ಉಲ್ಲೇಖವು ಮಂತಗಿಯ ಕ್ರಿ.ಶ.1165 ರ ಶಾಸನದಿಂದ ತಿಳಿಯುವುದು. [ಜಿ.ಕೆ.ದೇವರಾಜಸ್ವಾಮಿ : ಕಳಚೂರಿ ಶಾಸನಗಳು. 114. ಪು–246–251]

Scanned with OKEN Scanner

| ಅ.ನಂ | ಸ್ಥಳ | ತಾಲೂಕು | ಜಿಲ್ಲೆ | ಅರಸ | ಕಾಲ | ದೇವಾಲಯ | ನಿರ್ಮಾಪಕ | ಉಲ್ಲೇಖ |
|---|---|---|---|---|---|---|---|---|
| 01 | ಯಕ್ಸಂಬಾ | ಚಿಕ್ಕೋಡಿ | ಬೆಳಗಾವಿ | ಬಿಜ್ಜಳ | ಕ್ರಿ.ಶ. 1165 ಬಸದಿ | ನೇಮಿನಾಥ | | KB. XI. Issue 2 1978 |
| 02 | ಮಂತಗಿ | ಹಾನಗಲ್ | ಹಾವೇರಿ | ಬಿಜ್ಜಳ | ಕ್ರಿ.ಶ. 1165 | ಜೈನ ಮಂದಿರ | | AR B-207 of 1947-48 |
| 03 | ಕುಣಿಕೊಪ್ಪ | ಸೊರಬ | ಶಿವಮೊಗ್ಗ | ಸೋವಿ | ಕ್ರಿ.ಶ. 1170 | ಜೀನೇಂದ್ರ ದೇವಾಲಯ | ಲೋಕಗಾವುಂಡಿ | EC VIII Sorab No.345 |
| 04 | ಚಿಕ್ಕಹಂದಿಗೊಳ | ಗದಗ | ಗದಗ | ಸೋವಿ | ಕ್ರಿ.ಶ. 1174 ಜೀನಸ್ಥಾನ | ಘಟಾಂತಿಕ ಯತಿ | ಬಾಹುಬಲಿ | SII XV. 128. GKD. 237. |

## ಜೈನ ಬಸದಿಗಳು/ಮಂದಿರಗಳು

ಚಿಕ್ಕಹಂದಿಗೋಳದ ಪೋಲಿಸ್ ಅಂದನಗೌಡ ಅವರ ಮನೆಯ ಆವರಣದಲ್ಲಿ ದೊರೆತ ಕ್ರಿ.ಶ.1174 ರ ಕಾಲದ ಸೋವಿದೇವನ ಶಾಸನದಲ್ಲಿ ಜೈನ ಶಾಸನದಲ್ಲಿ ಬ್ರಾಹ್ಮಣರ ಅಗ್ರಹಾರದ ಉಲ್ಲೇಖವಿದ್ದು ಜೀನಸ್ಥಾನವೆಂಬ ಬಸದಿಗೆ ಹಂದಿಗೊಳದ 64 ಮಹಾಜನರು ಭೂಮಿ, ಗಾಣ ಮತ್ತಿತರ ದಾನವನ್ನು ನೀಡಿದ ವಿವರವನ್ನು ಒಳಗೊಂಡಿದೆ.

ನದಿಹರಹಳ್ಳಿಯ ಶಾಸನವದಲ್ಲಿ ಜೀನಾಲಯದ ಮುನಿಗಳಿಗೆ ಹಾಗೂ ಕಂತಿಯರ ಭೋಜನಕ್ಕಾಗಿ ದಾನ ನೀಡಿರುವ ಮಾಹಿತಿಯು ಇದೆ. ಅಲ್ಲದೇ ಮೂಲ ಸಂಘದ ಸೌರಸ್ಥಗಣದ ವಾಸುಪೂಜ್ಯ ಮುನೀಂದ್ರ, ಚಿಇತ್ರಕೂಟ ಸುಪೂಜ್ಯಮುನೀಂದ್ರ, ರಾವಣಂದಿ ಮುನೀಂದ್ರರ ಹೆಸರುಗಳನ್ನು ಒಳಗೊಂಡಿದೆ.

ಕುಣಿಕೊಪ್ಪದ ಕ್ರಿ.ಶ. 1170 ರ ಸೋವಿದೇವನ ಕಾಲದ ಶಾಸನವು ಜೀನೇಂದ್ರ ಮಂದಿರದ ನಿರ್ಮಾಣದ ಕುರಿತು ಉಲ್ಲೇಖಿಸುತ್ತಾ ಮಹಾಮಂಡಳಾಚಾರ್ಯ ಭಾನುಕೀರ್ತಿ ಸೈದ್ಧಾಂತಿಕ ಮುನಿಯ ಹೆಸರನ್ನು ದಾಖಲಿಸಿದೆ. ಈ ಶಾಸನಗಳಲ್ಲಿ ನೇಮಿನಾಥ. (ಯಕ್ಸಂಬಾ ಶಾಸನ), ಚಿಕ್ಕಹಂದಿಗೋಳದ ಶಾಸನದಲ್ಲಿ ಬಾಹುಬಲಿ ಯ ಉಲ್ಲೇಖವು ಇರುವುದು. ಇದರಿಂದ ದಿಗಂಬರ ಜೈನ ಸಂಪ್ರದಾಯ ಅಂದು ಮುಂದುವರೆದಿತ್ತು ಎಂಬುದು ಸ್ಪಷ್ಟವಾಗುವುದು.

ಶಿವಮೊಗ್ಗ ಜಿಲ್ಲೆಯ ಚಿಕ್ಕಮಾಗಡಿಯ ಚನ್ನಬಸವಣ್ಣ ದೇವಾಲಯದ ಮುಂದಿರುವ ಕ್ರಿ.ಶ. 1182 ರ ಶಾಸನದಲ್ಲಿ ಜೀನ ಮಂದಿರದ ಸ್ಥಾನಾಚಾರ್ಯ ಭಾನುಕೀರ್ತಿ ಸಿದ್ಧಾಂತ ಮುನಿಗಳು ಶಬ್ದಶಾಸ್ತ್ರನುರರೀಕೃತ ತರ್ಕಕಳಾಕಳಾಪನೂರೀಕೃತ ಕಾವ್ಯನಾಟಕನಧಃ ಕೃತಮೌನಪತಾಕವಿಕ್ರಮಂ ಎಂದು ಅವರ ಪಾಂಡಿತ್ಯವನ್ನು ಹೊಗಳಿದೆ.

## ಶಾಸನೋಕ್ತ ಮಠಗಳು :

ಕಳಚೂರಿಗಳ ಶಾಸನಗಳಲ್ಲಿ ದೇವಾಲಯಗಳ ಜೊತೆಯಲ್ಲಿ ಮಠಗಳ ಉಲ್ಲೇಖಗಳೂ ದೊರೆಯುತ್ತವೆ. ಅವುಗಳಲ್ಲಿ ಪಂಚಮಠ, ಸಂಜೆಮಠ, ಹಿರೇಮಠ, ಕೋಡಿಯಮಠ, ಪುರಾಣಮಠ, ಮಾಣಿಕಮಠ, ರಾಮೇಶ್ವರ ಮಠಗಳ

ಉಲ್ಲೇಖಗಳು ಕಂಡುಬರುತ್ತವೆ. ಪಂಚಮಠಗಳ ಬಗ್ಗೆ 10 ಶಾಸನಗಳಲ್ಲಿ, ಕೋಡಿಮಠದ ಬಗ್ಗೆ 04 ಶಾಸನಗಳಲ್ಲಿ, ಸಂಜೆಮಠ 01, ಮಾಣಿಕಮಠ 01, ಹಿರಿಯಮಠ 02, ರಾಮೇಶ್ವರ ಮಠ 01 ಶಾಸನಗಳಲ್ಲಿ ಉಲ್ಲೇಖಿತವಾಗಿದೆ.

**ಸಮಾರೋಪ :**

ಒಟ್ಟಾರೆ ಕನ್ನಡ ನಾಡನ್ನಾಳಿದ ಕಳಚೂರಿ ಅರಸರು ಶೈವ, ವೈಷ್ಣವ, ಜೈನ ಧರ್ಮಗಳ ಪ್ರಗತಿಗೆ ಪ್ರೋತ್ಸಾಹವನ್ನು ನೀಡುತ್ತಾ ದೇವಾಲಯಗಳು, ಬಸದಿಗಳನ್ನು ನಿರ್ಮಾಣ ಮಾಡುವ ಕಾರ್ಯದಲ್ಲಿಯೂ ಸಹಾಯ ಸಹಕಾರವನ್ನು ನೀಡುತ್ತಿದ್ದುದರಿಂದ ಅಂದು ಧಾರ್ಮಿಕವಾಗಿ ಜನರು ಸ್ವತಂತ್ರ್ಯವಾದ ಜೀವನವನ್ನು ನಡೆಸುತ್ತಿದ್ದರೆಂಬುದು ಈ ಲೇಖನದ ಮೂಲಕ ತಿಳಿಯಬಹುದಾಗಿದೆ.

**ಗ್ರಂಥಋಣ :**


ಎಫಿಗ್ರಾಫಿಯಾ ಕರ್ನಾಟಿಕ ಸಂಪುಟಗಳು

ಪ್ರೊ. ಜಿ.ಕೆ.ದೇವರಾಜಸ್ವಾಮಿ : ಕಳಚೂರಿ ಶಾಸನಗಳು — ಯುವಸಾಧನೆ ಪ್ರಕಾಶನ ಐಡಿಯಲ್ ಹೋಮ್ಸ್ ರಾಜರಾಜೇಶ್ವರಿ ನಗರ ಬೆಂಗಳೂರು

ಡಾ. ಕೆ. ಪಿ. ಈರಣ್ಣ — ಕಾಳಾಮುಖ — ಮನು ಸಾಹಿತ್ಯ ಪ್ರಕಾಶನ ಧಾರವಾಡ 2014

K.P.Iranna & Dr. H.R.Desai — Inscriptions of Kalachuri — Omkar Prakashan Dharawad - 2012

ಡಾ. ದೇವರಕೊಂಡಾ ರೆಡ್ಡಿ [ಸಂ] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 9 — ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ. 2006

ಡಾ. ದೇವರಕೊಂಡಾ ರೆಡ್ಡಿ [ಸಂ] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 1 — ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ

| | | |
|---|---|---|
| ಡಾ. ದೇವರಕೊಂಡಾ ರೆಡ್ಡಿ [ಸಂ] | ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 2 | ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ. |

*****

Scanned with OKEN Scanner

ಶೋಧದ ನೆಲೆ

ರಿಸರ್ಚ್ ಎಂಬ ಇಂಗ್ಲೀಷ ಶಬ್ದಕ್ಕೆ ಕನ್ನಡದಲ್ಲಿ ಸಂಶೋಧನೆ ಎಂದು ಹೇಳಬಹುದು. ಸಂಶೋಧನೆ ಎಂಬ ಪ್ರಕ್ರಿಯೆ ಸೃಜನೇತರ ಸಾಹಿತ್ಯ ಎಂಬ ವಿಭಾಗಕ್ಕೆ ಸೇರಿಸಿದ್ದಾರೆ. ಹೀಗಾಗಿ ಇದು ಬಹಳಷ್ಟು ಜನರಿಗೆ ಆಕರ್ಷಕವಾಗಿಲ್ಲ. ಗತದ ಆಧಾರದ ಮೇಲೆ ವರ್ತಮಾನ ಸಮಾಜ ಕಟ್ಟಬೇಕಾಗಿದೆ. ಅಂದರೆ ಸಂಶೋಧನೆ ಸೃಜನವಾಗಬೇಕಿದೆ. ಎಂ. ಎಂ. ಕಲಬುರ್ಗಿಯವರು ಹೇಳುವಂತೆ, ಸಂಶೋಧಕ ಆಕಸ್ಮಿಕ ತಪ್ಪು ಹೇಳಿರಬಹುದು, ಸುಳ್ಳು ಹೇಳಲಾರ.

ಈ ಸಂಕಲನದಲ್ಲಿ ವೈವಿಧ್ಯ ಪ್ರಬಂಧಗಳ ಗುಚ್ಛ ಇದೆ. ವಚನ, ಕಾದಂಬರಿ, ನಾಟಕ, ದಲಿತ, ತತ್ವಪದ, ಬಯಲಾಟ, ಜನಪದ ಮತ್ತು ಸಮುದಾಯಕ್ಕೆ ಸಂಬಂಧಿಸಿದ ವಿಶ್ಲೇಷಣೆ ಇದೆ. ಸಂಶೋಧನಾ ಕ್ಷೇತ್ರದಲ್ಲಿ ಕಾಲಿಡುವ ವಿದ್ಯಾರ್ಥಿಗಳಿಂದ ಪ್ರಾರಂಭವಾಗಿ ಈ ಕ್ಷೇತ್ರದಲ್ಲಿ ಪಳಗಿರುವ ಪ್ರಬಂಧಗಳನ್ನು ಈ ಸಂಕಲನ ಒಳಗೊಂಡಿದೆ.

ಸಂಶೋಧನೆ ಎಂದರೆ ಏನು ಎಂಬ ವಿಷಯದ ಬಗ್ಗೆ ಪ್ರಾರಂಭದಲ್ಲಿ ಒಂದು ಲೇಖನ ಇದ್ದರೆ ಈ ಪುಸ್ತಕದ ಮೌಲ್ಯ ಇನ್ನೂ ಹೆಚ್ಚುತ್ತಿತ್ತು ಎನಿಸುತ್ತದೆ. ಕೇವಲ ಸಂಶೋಧನಾ ವಿದ್ಯಾರ್ಥಿಗಳಲ್ಲದೆ ಸಾಮಾನ್ಯ ಓದುಗರ ಜ್ಞಾನ ಪರೀಧಿಯನ್ನು ಈ ಗ್ರಂಥದ ಓದು ವಿಸ್ತರಿಸುತ್ತದೆ. ನನ್ನಂತಹ ಅನಾಮಿಕನಿಂದ ಚೆನ್ನುಡಿ ಬಯಸಿದ ಸಂಪಾದಕರ ಮನೋನಿರ್ಧಾರಕ್ಕೆ ನಾನು ಋಣಿಯಾಗಿದ್ದೇನೆ.

ಪ್ರೊ. ಮಹೇಶ ತಿಪ್ಪಶೆಟ್ಟಿ
ಸಾಹಿತಿಗಳು, ಹುನಗುಂದ



ರೂ. ೮೦/-

9 788194 812845